# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **904** (821) |
| ಉತ್ತರಿಸಬೇಕಾದ ದಿನಾಂಕ | : | 10.03.2021 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 2018 ರಿಂದ ಇಲ್ಲಿಯವರೆಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದವರಿಗೆ ಮನೆಗಳ ನಿರ್ಮಾಣಕ್ಕೆ ಇಟ್ಟಿದ್ದ ಗುರಿ ಎಷ್ಟು; ಬಿಡುಗಡೆ ಮಾಡಲಾದ ಅನುದಾನ ಎಷ್ಟು ಮತ್ತು ನಿಗಧಿಪಡಿಸಲಾದ ಗುರಿಯಲ್ಲಿ ಎಷ್ಟು ಮನೆಗಳು ಪೂರ್ಣವಾಗಿದೆ; ಅಪೂರ್ಣ ಕಾಮಗಾರಿಗಳೆಷ್ಟು; (ಕೊಡಗು ಜಿಲ್ಲೆಯ ಮಾಹಿತಿಯನ್ನು ಪ್ರತ್ಯೇಕವಾಗಿ ವಿವರ ನೀಡುವುದು) | ರಾಜ್ಯದಲ್ಲಿ 2018ರಿಂದ ಇಲ್ಲಿಯವರೆಗೂ ವಿವಿಧ ವಸತಿ ಯೋಜನೆಗಳಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದವರಿಗೆ ನಿಗಧಿಪಡಿಸಿದ ಗುರಿ, ಭೌತಿಕ ಪ್ರಗತಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ: (see table below) |

| ಯೋಜನೆ | ವರ್ಗ | ನಿಗಧಿ ಪಡಿಸಲಾದ ಗುರಿ | ಫಲಾನುಭವಿಗಳ ಆಯ್ಕೆ | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|---|
| ಬಸವ ವಸತಿ* | ಸಾ/ಅ.ಸಂ | 467 | 467 | 206 | 173 | 160.48 |
| ದೇವರಾಜ್ ಅರಸು | ಪ.ಜಾ/ಪ.ಪಂ | 1258 | 1258 | 45 | 479 | 91.60 |
| | ಸಾ/ಅ.ಸಂ | 4580 | 4580 | 19 | 396 | 57.60 |
| ಪಿಎಂಎವೈ (ಗ್ರಾ) | ಪ.ಜಾ/ಪ.ಪಂ | 10445 | 1912 | 26 | 590 | 75.87 |
| | ಸಾ/ಅ.ಸಂ | 75555 | 38409 | 1160 | 13943 | 2141.27 |
| **ಒಟ್ಟು** | | **92305** | **46626** | **1456** | **15581** | **2526.82** |

*ಸರ್ಕಾರದ ಆದೇಶ ಸಂಖ್ಯೆ: ವಇ 12 ಹೆಚ್‌ಎಹೆಚ್ 2020, ದಿನಾಂಕ:19.05.2020ರಲ್ಲಿ ಬಸವ ವಸತಿ ಯೋಜನೆಯಡಿ ಆಯ್ಕೆಯಾಗದ ಹಾಗೂ ವಿವಿಧ ಹಂತದ ಲಾಗಿನ್ ನಲ್ಲಿ ಅನುಮೋದನೆಗೆ ಬಾಕಿ ಇರುವ ಮನೆಗಳನ್ನು ಹಿಂಪಡೆಯಲಾಗಿದೆ.

ಈ ಪೈಕಿ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ನಿಗಧಿಪಡಿಸಿದ ಗುರಿ, ಭೌತಿಕ ಪ್ರಗತಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ:

| ಯೋಜನೆ | ವರ್ಗ | ನಿಗಧಿಪಡಿಸಲಾದ ಗುರಿ | ಫಲಾನುಭವಿಗಳ ಆಯ್ಕೆ | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| ಬಸವ ವಸತಿ* | ಸಾ/ಅ.ಸಂ | 6 | 6 | 0 | 0 | 0.00 |
| ಪಿಎಂಎವೈ (ಗ್ರಾ) | ಪ.ಜಾ/ಪ.ಪಂ | 42 | 0 | 0 | 0 | 0.00 |
| | ಸಾ/ಅ.ಸಂ | 35 | 2 | 0 | 2 | 0.00 |
| **ಒಟ್ಟು** | | **83** | **8** | **0** | **2** | **0.00** |

<table>
<tr>
<td>ಆ)</td>
<td>ಕೊಡಗು ಜಿಲ್ಲೆಯಲ್ಲಿ ಸಾಮಾನ್ಯ ವರ್ಗದವರಿಗೆ (ಬಡತನ ರೇಖೆಗಿಂತ ಕೆಳಗಿರುವವರಿಗೆ ಮನೆಗಳ ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿಗಳಲ್ಲಿ ಗುರುತಿಸಲಾದ ಫಲಾನುಭವಿಗಳೆಷ್ಟು; (ವಿವರ ನೀಡುವುದು)</td>
<td>ಕೊಡಗು ಜಿಲ್ಲೆಯಲ್ಲಿ 2018-19ರಿಂದ ಇಲ್ಲಿಯವರೆಗೆ ಸಾಮಾನ್ಯ ವರ್ಗದ 5 ಫಲಾನುಭವಿಗಳನ್ನು ವಸತಿ ಸೌಲಭ್ಯ ಕಲ್ಪಿಸಲು ಗುರುತಿಸಲಾಗಿದ್ದು, ವಿವರ ಕೆಳಕಂಡಂತಿದೆ.
<table>
<tr><th>ಯೋಜನೆ</th><th>ಗುರುತಿಸಲಾದ ಫಲಾನುಭವಿಗಳು</th></tr>
<tr><td>ಬಸವ ವಸತಿ</td><td>4</td></tr>
<tr><td>ಪಿಎಂಎವೈ (ಗ್ರಾ)</td><td>1</td></tr>
<tr><td>ಒಟ್ಟು</td><td>5</td></tr>
</table>
</td>
</tr>
<tr>
<td>ಇ)</td>
<td>ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಕಡಿಮೆ ಇದ್ದು, ಸಾಮಾನ್ಯ ವರ್ಗದವರು ಹೆಚ್ಚಾಗಿರುವ ಕಡೆ ಮನೆಗಳ ನಿರ್ಮಾಣಕ್ಕೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಉಪಯೋಗವಿಲ್ಲದಿರುವ ಸಂದರ್ಭದಲ್ಲಿ ಬಿಡುಗಡೆಯಾದ ಅನುದಾನವನ್ನು ಸಾಮಾನ್ಯ ವರ್ಗದವರಿಗೆ ನಿಯಮದಲ್ಲಿ ಅವಕಾಶ ಇದೆಯೇ; ಇಲ್ಲವಾದಲ್ಲಿ ಅವಕಾಶ ಮಾಡಿಕೊಡಲು ಸರ್ಕಾರದ ಚಿಂತನೆಗಳೇನು ?</td>
<td>ಬಸವ ವಸತಿ ಯೋಜನೆಯಡಿ ಸಾಮಾನ್ಯ ವರ್ಗದ ವಸತಿರಹಿತರಿಗೆ ಹಾಗೂ ಡಾ. ಬಿ.ಆರ್ ಅಂಬೇಡ್ಕರ್ ವಸತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಮಾರ್ಗಸೂಚಿಯನ್ವಯ ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.60ರಷ್ಟು, ಸಾಮಾನ್ಯ ವರ್ಗದವರಿಗೆ ಶೇ.25ರಷ್ಟು ಹಾಗೂ ಅಲ್ಪಸಂಖ್ಯಾತರಿಗೆ ಶೇ.15ರಷ್ಟು ಮೀಸಲಾತಿಯು ಕಡ್ಡಾಯವಾಗಿರುತ್ತದೆ. ಆದ್ದರಿಂದ ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಕಡಿಮೆ ಇದ್ದು, ಸಾಮಾನ್ಯ ವರ್ಗದವರು ಹೆಚ್ಚಾಗಿರುವ ಕಡೆ ಮನೆಗಳ ಗುರಿಯನ್ನು ವರ್ಗಾಯಿಸಲು ಬರುವುದಿಲ್ಲ. ಅದರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಉಪಯೋಗವಿಲ್ಲದಿರುವ ಸಂದರ್ಭದಲ್ಲಿ ಬಿಡುಗಡೆಯಾದ ಅನುದಾನವನ್ನು ಸಾಮಾನ್ಯ ವರ್ಗದವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.</td>
</tr>
</table>

ಸಂಖ್ಯೆ :ವಇ 904 ಹೆಚ್‌ಎಂ 2021

**(ವಿ. ಸೋಮಣ್ಣ)**
ವಸತಿ ಸಚಿವರು